(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಅಧ್ಯಕ್ಷರು** :– ಈ ಸದನವ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರುಗಳ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಮುಂದಿನ ಕಾರ್ಯಕ್ರಮ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

## 2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಮೂರನೇ ಪಟ್ಟಿ)

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)** :– ಮಾನ್ಯ ಅಧ್ಯಕ್ಷರೆ,

**ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ)** :– ಪರವಾಗಿ,

**1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣ ಮೇರೆಗೆ :**

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಭಾರತ ಜನ ಸಂಖ್ಯಾ ಯೋಜನೆಯಡಿಯಲ್ಲಿ ದಿನಾಂಕ 01.04.1984 ರಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ 'ಸಿ' ಮತ್ತು 'ಡಿ' ದರ್ಜೆಯ ನೌಕರರ ಸೇವೆಯನ್ನು ಸಕ್ರಮತಿಗೊಳಿಸಲು 2003ರ ವಿಶೇಷ ನಿಯಮಗಳನ್ನು ರಚಿಸಿ ದಿನಾಂಕ 16.12.2003ರಂದು ಹೊರಡಿಸಲಾದ ಸಿಆಸುಇ:52:ಎಸ್ಆರ್‌ಡಿ: 2002ನೇ ಸಂಖ್ಯೆಯ ಅಧಿಸೂಚನೆ;

2. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 ಮತ್ತು 215 – ಎಗೆ ತಿದ್ದುಪಡಿ ಮಾಡಿ ದಿನಾಂಕ 11.11.2003ರಂದು ಹೊರಡಿಸಲಾದ ಆಇ:08: ಸನಿತಿ: 2002ನೇ ಸಂಖ್ಯೆಯ ಅಧಿಸೂಚನೆ;

3. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 235, 416 ಮತ್ತು 417ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10.10.2003ರಂದು ಹೊರಡಿಸಲಾದ ಆಇ:10:ಸನಿತಿ:2001ನೇ ಸಂಖ್ಯೆಯ ಅಧಿಸೂಚನೆ;

**2002ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆಯ ಅಧಿನಿಯಮ 8ರ ಪ್ರಕರಣದ ಮೇರೆಗೆ :**

4. 2003ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ನಿಯಮಾವಳಿಗಳನ್ನು ರಚಿಸಿ ದಿನಾಂಕ 10.12.2003ರಂದು ಹೊರಡಿಸಲಾದ ಆಇ:05:ಪಿಎಂಯು:2003ನೇ ಸಂಖ್ಯೆಯ ಅಧಿಸೂಚನೆ;

**1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಕಲಂ 39ರ ಪ್ರಕರಣದ ಮೇರೆಗೆ :**

5. 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಹೊರಡಿಸಲಾಗಿದ್ದ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸಿ

1. ಎಫ್‌ಡಿ: 73 : ಸಿಎಸ್‌ಎಲ್:99(1) ದಿನಾಂಕ 23.8.1999
2. ಎಫ್‌ಡಿ: 73 : ಸಿಎಸ್‌ಎಲ್: 99(2) ದಿನಾಂಕ 23.8.1999
3. ಎಫ್‌ಡಿ: 1 : ಸಿಎಸ್‌ಎಲ್ : 97(4) ದಿನಾಂಕ 25.1.1997
4. ಎಫ್‌ಡಿ: 1 : ಸಿಎಸ್‌ಎಲ್ : 97(5) ದಿನಾಂಕ 25.1.1997
5. ಎಫ್‌ಡಿ: 1 : ಸಿಎಸ್‌ಎಲ್ : 97(6) ದಿನಾಂಕ 25.1.1997

ದಿನಾಂಕ 23.12.2003ರಂದು ಹೊರಡಿಸಲಾಗಿರುವ ಎಫ್‌ಡಿ: 23: ಸಿಎಸ್‌ಎಲ್: 2002(1)ರ ಸಂಖ್ಯೆಯ ಅಧಿಸೂಚನೆ;

6. ರಕ್ಷಣಾ ದಳ ಸಿಬ್ಬಂದಿಯವರು ಖರೀದಿಸುವ ಕೇಕ್‌ಗಳ ಮೇಲೆ ಪಾವತಿಸಬೇಕಾದ ಮಾರಾಟ ತೆರಿಗೆಗೆ ದಿನಾಂಕ 31.01.2004ರ ವರೆಗೆ ವಿನಾಯಿತಿ ನೀಡಿ ದಿನಾಂಕ 08.01.2004ರಂದು ಹೊರಡಿಸಲಾದ ಆಇ: 354:ಸಿಎಸ್‌ಎಲ್: 2003ರ ಸಂಖ್ಯೆಯ ಅಧಿಸೂಚನೆ;

7. ಅಲ್ಯೂಮಿನಿಯಂ ಕಂಡಕ್ಟರ್, ಅಲ್ಯೂಮಿನಿಯಂ ಅಲಾಯ್ ಕಂಡಕ್ಟರ್ಸ್ ಮತ್ತು ಏರಿಯಲ್ ಬಂಚ್ ಕಂಡಕ್ಟರ್ಸ್‌ಗಳನ್ನು ಕರ್ನಾಟಕ ಪವರ್ ಟ್ರಾನ್ಸ್‌ಮೀಷನ್ ಕಾರ್ಪೋರೇಷನ್ ಅವರಿಗೆ ಸರಬರಾಜು ಮಾಡುವ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ದಿನಾಂಕ 31.03.2004ರವರೆಗೆ ಶೇಕಡ 2 ರಷ್ಟು ಕಡಿಮೆಗೊಳಿಸಿ ದಿನಾಂಕ 08.01.2004ರಂದು ಹೊರಡಿಸಲಾದ ಆಇ:210:ಸಿಎಸ್‌ಎಲ್:2003ರ ಅಧಿಸೂಚನೆ;

8. ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಮೆ: ಕೃಷ್ಣ ಭಾಗ್ಯ ಜಲ ನಿಗಮಕ್ಕೆ ಮಾರಾಟ ಮಾಡುವ ವಸ್ತುಗಳ ಮೇಲೆ (ಸಿಮೆಂಟ್, ಮರ, ಪೆಟ್ರೋಲ್ ಮತ್ತು ಡೀಸಲ್ ಹೊರತುಪಡಿಸಿ) ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ಶೇಕಡ 5ರಷ್ಟು ಕಡಿಮೆಗೊಳಿಸಿ ದಿನಾಂಕ 02.01.2004ರಂದು ಹೊರಡಿಸಲಾದ ಆಇ: 157: ಸಿಎಸ್‌ಎಲ್: 2003ರ ಸಂಖ್ಯೆಯ ಅಧಿಸೂಚನೆ;

**1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ 31ರ ಪ್ರಕರಣದ ಮೇರೆಗೆ :**

9. ಎಫ್‌ಡಿ: 73:ಸಿಎಸ್‌ಎಲ್:99(5) ದಿನಾಂಕ 23.08.1999ಕ್ಕೆ ತಿದ್ದುಪಡಿ ಮಾಡಿ ಮೆ: ಕಲ್ಯಾಣ ಫೆರೆಸ್ ಕೈಗಾರಿಕಾ ಲಿಮಿಟೆಡ್ ಕಾರ್ಖಾನೆಯನ್ನು ಹೊರತುಪಡಿಸಿ, ದಿನಾಂಕ: 23.12.2003ರಂದು ಹೊರಡಿಸಲಾದ ಎಫ್‌ಡಿ:23:ಸಿಎಸ್‌ಎಲ್:2003ನೇ ಸಂಖ್ಯೆಯ ಅಧಿಸೂಚನೆ;

10. ಸಾರ್ವಜನಿಕ ಹಿತದೃಷ್ಟಿಯಿಂದ ಶವ ವಾಹನ ಮತ್ತು ಮೋಟಾರ್ ವಾಹನವನ್ನು ಶವ ವಾಹನವಾಗಿ ಪರಿವರ್ತಿಸಲು ಸ್ಥಳೀಯ ಪ್ರದೇಶಗಳಿಗೆ ಪ್ರವೇಶಿಸಲು ಪಾವತಿಸಬೇಕಾದ ಪ್ರವೇಶ ತೆರಿಗೆಗೆ ದಿನಾಂಕ : 01.04.2003ರಿಂದ ವಿನಾಯಿತಿ ನೀಡಿ ದಿನಾಂಕ: 23.12.2003ರಂದು ಹೊರಡಿಸಲಾದ ಎಫ್‌ಡಿ:74:ಇಇಟಿ:2003ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :-- ಮಾನ್ಯ ಅಧ್ಯಕ್ಷರೆ,

**1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 29ನೇ ಪ್ರಕರಣದ ಮೇರೆಗೆ :**

1. ಮೆ: ಸಮರ್ಥ ಕ್ರಿಯೇಷನ್ಸ್ ಬೆಂಗಳೂರು – 85 ಇವರಿಗೆ ದಿನಾಂಕ 09.01.2004 ರಿಂದ 31.12.2004ರ ವರೆಗೆ 'ಕಲರವ' ಮಕ್ಕಳ ಚಲನಚಿತ್ರಗಳನ್ನು ಮೈಸೂರು, ದಾವಣಗೆರೆ, ಧಾರವಾಡ, ತುಮಕೂರು ಮತ್ತು ಬೆಂಗಳೂರು ನಗರಗಳಲ್ಲಿ ಅಯ್ದು ಚಲನಚಿತ್ರ ಮಂದಿರಗಳಲ್ಲಿ 5ನೇ ಪ್ರದರ್ಶನವನ್ನಾಗಿ ಆಯಾ ಜಿಲ್ಲಾಧಿಕಾರಿಗಳ ಸಹಯೋಗದಿಂದ ಪ್ರದರ್ಶಿಸಲು (ಬೆಳಗಿನ ವಿಶೇಷ ಪ್ರದರ್ಶನ) ಅನುಮತಿ ನೀಡಿ ದಿನಾಂಕ 12.01.2004ರಂದು ಹೊರಡಿಸಲಾದ ಒಸಾಇ:54: ಸಿಎನ್‌ಎ:2003ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**ಅಧ್ಯಕ್ಷರು :-** ಮಂಡಿಸಲಾಯಿತು.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ

III **ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರ ಪರವಾಗಿ) :-**

**1965ರ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 71(4)ರ ಪ್ರಕರಣದ ಮೇರೆಗೆ :**

12. 1967ರ ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನ, ಸಾಗಾಣಿಕೆ ಆಮದು ಮತ್ತು ರಫ್ತು) ನಿಯಮಗಳ ನಿಯಮ 3,4,5,6,7 ಹಾಗೂ 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02.12.2003ರಂದು ಹೊರಡಿಸಲಾದ ಎಫ್‌ಡಿ: 26:ಪಿಇಎಸ್:2003(1)ನೇ ಸಂಖ್ಯೆಯ ಅಧಿಸೂಚನೆ;

13. 1990ರ ಕರ್ನಾಟಕ ಅಬಕಾರಿ (ಪರ್ಮಿಟ್ ಫೀ) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02.12.2003ರಂದು ಹೊರಡಿಸಲಾದ ಎಫ್‌ಡಿ:26:ಪಿಇಎಸ್:2003(2)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

**ಅಧ್ಯಕ್ಷರು :-** ಮಂಡಿಸಲಾಯಿತು.

**IV ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ

**1956ರ ಕಂಪನಿ ಕಾಯ್ದೆಯ ಅಧಿನಿಯಮ 619(4) ಪ್ರಕರಣದ ಮೇರೆಗೆ :**

1. ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ 2002–03ನೇ ಸಾಲಿನ 18ನೇ ವಾರ್ಷಿಕ ವರದಿ.

**ಮಲ್ಲಿಕಾರ್ಜುನ ಖರ್ಗೆ (ಸಣ್ಣ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ,

**V ಶ್ರೀ ಹೆಚ್.ಕೆ. ಪಾಟೀಲ್ (ಕೃಷಿ ಸಚಿವರು) :-** ಪರವಾಗಿ,

**1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :**

1. ಮೈಸೂರು ಟೊಬಾಕೊ ಕಂಪನಿ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ ಹಾಗೂ ಆಡಿಟೆಡ್ ಲೆಕ್ಕಪತ್ರಗಳು.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ,

**ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-** ಅವರ ಪರವಾಗಿ,

**1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ :**

1. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಗದಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ರಾಯಚೂರು ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ಮೈಸೂರು ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) :-** ಮಾನ್ಯ ಅಧ್ಯಕ್ಷರೆ,

VII ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :– ಪರವಾಗಿ

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ 32 ವಾರ್ಷಿಕ ವರದಿ.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2002–03ನೇ ಸಾಲಿನ ವಾರ್ಷಿಕ ವರದಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ,

VIII ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :– ಅವರ ಪರವಾಗಿ

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಮೈಸೂರು ಪೇಪರ್ ಮಿಲ್ಸ್ ನಿಯಮಿತದ 2002–03ನೇ ಸಾಲಿನ 68ನೇ ವಾರ್ಷಿಕ ವರದಿ.

2. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ 43ನೇ ವಾರ್ಷಿಕ ವರದಿ.

3. ಹುಟ್ಟಿ ಗೋಲ್ಡ್ ಮೈನ್ಸ್ ಕೊ ಲಿಮಿಟೆಡ್‌ನ 2002–03ನೇ ಸಾಲಿನ 57ನೇ ವಾರ್ಷಿಕ ವರದಿ.

4. ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ನ 2002–03ನೇ ಸಾಲಿನ 23ನೇ ವಾರ್ಷಿಕ ವರದಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) :– ಮಾನ್ಯ ಅಧ್ಯಕ್ಷರೆ,

IX ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :– ಪರವಾಗಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ :

1. ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2002–03ನೇ ಸಾಲಿನ 9ನೇ ವಾರ್ಷಿಕ ವರದಿ.

2. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕ ತಪಾಸಣಾ ವರದಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ, ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ,

X ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :– ಅಧ್ಯಕ್ಷರ ಪರವಾಗಿ

1976ರ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯದ ಅಧಿನಿಯಮ 45(2), 47(4)ನೇ ಪ್ರಕರಣದ ಮೇರೆಗೆ :–

1. ಗುಲ್ಬರ್ಗಾ ವಿಶ್ವವಿದ್ಯಾನಿಲಯದ 2001–02ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಅನುಸರಣೀಯ ವರದಿ.

2. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2002–03ನೇ ಸಾಲಿನ 7ನೇ ವಾರ್ಷಿಕ ವರದಿ.

3. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ ಮೈಸೂರಿನ 2001–02ನೇ ಸಾಲಿನ ಲೆಕ್ಕ ತನಿಖಾ ವರದಿ ಮತ್ತು ವಾರ್ಷಿಕ ಲೆಕ್ಕಗಳು.

**ಅಧ್ಯಕ್ಷರು** :– ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

## 3. ವರದಿಯನ್ನೊಪ್ಪಿಸುವುದು

**ಶ್ರೀ ಎ. ನಾಗರಾಜು (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ)** :– ಮಾನ್ಯ ಅಧ್ಯಕ್ಷರೆ, ನಾನು 2003–04ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 30ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಅಧ್ಯಕ್ಷರು** :– ವರದಿಯನ್ನೊಪ್ಪಿಸಲಾಯಿತು.

**ಶ್ರೀ ಬಿ.ಬಿ. ಶಿವಪ್ಪ (ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ)** :– ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ, 103, 104, 105 ಹಾಗೂ 106ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಅಧ್ಯಕ್ಷರು** :– ವರದಿಯನ್ನೊಪ್ಪಿಸಲಾಯಿತು.

## 4. ವಿತ್ತೀಯ ಕಾರ್ಯಕಲಾಪಗಳು

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು)** :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ

(2003–04ನೇಯ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಈ ಕೆಳಗಿನ ಪ್ರಸ್ತಾವಗಳನ್ನು ಮಂಡಿಸುತ್ತಿದ್ದೇನೆ.

1. 2004ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಕೃಷಿ ಮತ್ತು ತೋಟಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜ್ಯಸ್ವ ಲೆಕ್ಕದಲ್ಲಿ 2899.00 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

2. 2004ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಪಶು ಸಂಗೋಪನೆ ಮತ್ತು ಮೀನುಗಾರಿಕೆ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 46.14 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

3. 2004ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಆರ್ಥಿಕ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 157392.17 ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.